O.S. 5/2020 Further Cross of DW 1

ದಿನಾಂಕ 06-02-2026 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಮುಂದುವರೆದ ಪಾಟೀ ಸವಾಲು :** ವಾದಿಗಳ ಪರ ಶ್ರೀ ಪಿ ಬಿ ಎ ವಕೀಲರಿಂದ.

ನೀವು ಖರೀದಿಸುವ ಸಮಯದಲ್ಲಿ 18 ಗುಂಟೆ 8 ಆಣೆ ಸ್ವತ್ತಿನಲ್ಲಿ ಹನುಮವ್ವ ಮತ್ತು ದೇಮವ್ವ ನವರ ಹಕ್ಕು ಇರಲಿಲ್ಲ ಎಂದರೆ ಸರಿ. ಹನುಮವ್ವ ಮತ್ತು ದೇಮವ್ವ ನವರು ತಮ್ಮ ಪಾಲಿನ ಆಸ್ತಿ ಪಡೆದು 18 ಗುಂಟೆ 8 ಆಣೆ ಸ್ವತ್ತಿನಲ್ಲಿನ ತಮ್ಮ ಹಕ್ಕನ್ನು ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿ. ಆದ್ದರಿಂದ ವಾರಸಾ ನಮೂದಿಗೆ ಹನುಮವ್ವ ಮತ್ತು ದೇಮವ್ವ ನವರು ತಕರಾರು ಮಾಡಲಿಲ್ಲ ಎಂದರೆ ಸರಿ. ಸಾಕ್ಷಿಗೆ ಎಮ್ ಆರ್ ನಂಬರ 7/2004-05 ಅನ್ನು ತೋರಿಸಿ ಆ ಪ್ರಕಾರ ಹನುಮವ್ವ ಮತ್ತು ದೇಮವ್ವ ನವರು ಹಕ್ಕು ಬಿಟ್ಟುಕೊಟ್ಟಿದ್ದರಿಂದ ಸದರಿ ಮೂಟೇಶನ್ ಗೆ ಅವರು ತಕರಾರು ಮಾಡಲಿಲ್ಲ ಎಂದರೆ ಸರಿ ಎನ್ನುತ್ತಾರೆ. ಆದ್ದರಿಂದ ಸದರಿ ಎಮ್ ಆರ್ ನಂಬರ 7/2004-05 ಅನ್ನು **ನಿಪಿ 21 ಎಂದು** ಗುರುತಿಸಲಾಯಿತು. ಈ ದಾವೆಯಲ್ಲಿ ನಿಮ್ಮ ಪ್ರತಿವಾದ ಪತ್ರಕ್ಕೆ ಬೆಂಬಲವಾಗಿ ಯಾವುದೇ ಕಾಗದ ಪತ್ರಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ವಾದಿಯ ಆಸ್ತಿಯ ಬಗ್ಗೆ ತಕರಾರು ಹಾಕಲು ನಿಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. FDP ನಂಬರ 4/2012 ಅನ್ನು ಎ ಎಮ್ ಪಾಟೀಲ್ ವಕೀಲರ ಮೂಲಕ ಸಲ್ಲಿಸಿದ್ದೀರಿ ಎಂದರೆ ಸರಿ. ತಹಶೀಲ್ದಾರ ಕಚೇರಿಯಲ್ಲಿ ನಡೆದ ಪ್ರಕರಣದ ಸಂಖ್ಯೆ ಆರ್ ಟಿ ಎಸ್/ತಕರಾರು/ವಿವ/1/2018-19 ರಲ್ಲಿ ತಕರಾರು ಸಲ್ಲಿಸಿದ್ದೀರಿ ಎಂದರೆ ಸರಿ. ಮುರ್ಕಾಯ ರವರಿಂದ ಖರೀದಿಸಿದ ಎಲ್ಲಾ ಖರೀದಿದಾರರ ಹಕ್ಕು ಬಾಧ್ಯತೆಗಳು ಅಸಲು ದಾವಾ ಸಂಖ್ಯೆ 13/2021 ರಲ್ಲಿ ನಿರ್ಧಾರವಾಗಬೇಕಿದೆ ಎಂದರೆ ಸರಿ.

O.S. 5/2020 Further Cross of DW 1

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.